O.S. NO. 255/2024

PW -1 .

Dated 09-06-2026.

ಸಾಕ್ಷಿಯನ್ನು ಈ ದಿನ ದಿನಾಂಕ 09-06-2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು .

ಪಾಟಿ ಸವಾಲುಃ 1, 11 ರಿಂದ 13 ನೇ ಪ್ರತಿವಾದಿಯರ ಪರವಾಗಿ ಶ್ರೀ ಎಸ್ ವಿ ಎಸ್ ವಕೀಲರಿಂದಃ

ನನ್ನ ಸಾಕ್ಷಿ ಪ್ರಮಾಣ ಪತ್ರ ತಯಾರಿಸಲು ಮಾಹಿತಿ ನಾನೇ ಕೊಟ್ಟಿರುತ್ತೇನೆ. ನನಗೆ ಈಗ ವಯಸ್ಸು 21 ವರ್ಷ ಆಗಿರುತ್ತವೆ. ನನಗೆ ಬೆನಚಿನಮರಡಿ ಗ್ರಾಮದ ಮಲ್ಲಿಕಾರ್ಜುನ ಜೊತೆ ಮದುವೆ ಮಾಡಿ ಕೊಟ್ಟಿರುತ್ತಾರೆ. ಪ್ರಸ್ತುತ ದಾವೆಯನ್ನು ಆಸ್ತಿ ಸಲುವಾಗಿ ನನ್ನ ತಂದೆ ವಿರುದ್ಧ ಸಲ್ಲಿಸಿದ್ದೇನೆ. ನಾನು 1 ನೇ ಪ್ರತಿವಾದಿಯ ಮಗಳು ಇರುವುದಿಲ್ಲ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯ ಹೆಂಡತಿ ಮತ್ತು ಮಕ್ಕಳು 11 ರಿಂದ 13 ನೇ ಪ್ರತಿವಾದಿಗಳು ಇದ್ದು, ನಾವು 1 ನೇ ಪ್ರತಿವಾದಿಗೆ ಯಾವುದೇ ರೀತಿ ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಯ ಮದ್ಯೆ ಯಾವುದೇ ವೈವಾಹಿಕ ಸಂಬಂದ ಇರುವುದಿಲ್ಲ ಮತ್ತು ಅವರ ಮದುವೆ ಯಾವತ್ತು ಆಗಿರುವುದಿಲ್ಲ ಎಂದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಯರು ಕಾನೂನು ಬದ್ದ ಗಂಡ ಹೆಂಡತಿಯರಮ ಎಂದು ತೋರಿಸಲು ದಾಖಲೆಗಳನ್ನು ಹಾಜರು ಪಡಿಸಿದ್ದೀರಾ ಎಂದರೆ ಹಾಜರು ಪಡಿಸಿದ್ದೇನೆ. ಆ ಕುರಿತು ನಾನು ಯಾವುದೇ ದಾಖಲಾತಿಗಳು ಸಲ್ಲಿಸಿರುವುದಿಲ್ಲ, 2 ನೇ ಪ್ರತಿವಾದಿ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ಎಲ್ಲ

ದಾಖಲಾತಿಗಳು ಖೊಟ್ಟಿ ತಯಾರಿ ಮಾಡಿಸಿಕೊಂಡು ತಂದು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಾಯಿ ಗೋಕಾಕನ ಜೆ ಎಮ್ ಎಪ ಸಿ ನ್ಯಾಯಾಲಯಲ್ಲಿ 1 ನೇ ಪ್ರತಿವಾದಿ ವಿರುದ್ಧ ಪೊಟಗಿ ಕೇಸು ಹಾಕಿರುತ್ತಾರೆ ಎಂದರೆ ನಿಜ. ಸದರಿ ಪ್ರಕರಣದಲ್ಲಿ ಸಹ 1 ನೇ ಪ್ರತಿವಾದಿಯು ತನ್ನ ತಕರಾರಿನಲ್ಲಿ 2 ನೇ ಪ್ರತಿವಾದಿಯು ತನ್ನ ಹೆಂಡತಿ ಅಲ್ಲ ಮತ್ತು ನಾವು ಅವರ ಮಕ್ಕಳು ಅಲ್ಲ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಜನನ ಪ್ರಮಾಣ ಪತ್ರ ಹಾಜರು ಮಾಡಿದ್ದೀರಾ ಎಂದರೆ ಮಾಡಿದ್ದೇನೆ. ದಾವಾ ಆಸ್ತಿಗಳನ್ನು ಎತ್ತಿ ಹಾಕಬೇಕೆಂದು ನಾನು ಮತ್ತು ನನ್ನ ತಾಯಿ ಸೇರಿ ಇದೊಂದು ಖೊಟ್ಟಿ ದಾವೆ ಹಾಕಿರುತ್ತೇವೆ ಎಂದರೆ ಸರಿಯಲ್ಲ. ಪ್ರಸ್ತುತ ದಾವಾ ಆಸ್ತಿಗಳಲ್ಲಿ ನಮಗೆ ಮತ್ತು 2 ನೇ ಪ್ರತಿವಾದಿಗೆ ಯಾವುದೆ ಹಕ್ಕು ಹಿತಾಸಕ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳ ಉತಾರದಲ್ಲಿ ಯಾರ ಯಾರ ಹೆಸರು ಇವೆ ಎಂದರೆ ನಮ್ಮ ಅಜ್ಜನ ಹೆಸರು ಇದೆ, ಅವರು ಈಗ ಮೃತಪಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ. ಜಿಪಿ ನಂ 367 ನೇದ್ದರ ಕುರಿತು ನನ್ನ ತಾಯಿ 2 ನೇ ಪ್ರತಿವಾದಿ ಕಿತ್ತೂರ ಪಟ್ಟಣ ಪಂಚಾಯತಿಯಲ್ಲಿ ಅಪಿಲು ಮಾಡಿರುತ್ತಾಳೆ ಎಂದರೆ ನನಗೆ ಮಾಹಿತಿ ಇರುವುದಿಲ್ಲ. ಸದರಿ ಅಪಿಲನಲ್ಲಿ 1 ನೇ ಪ್ರತಿವಾದಿ ತಕರಾರು ಸಲ್ಲಿಸಿದ್ದು ಅದು ವಿಚಾರಣೆ ಹಂತದಲ್ಲಿ ಇದೆ ಎಂದರೆ ನನಗೆ ಮಾಹಿತಿ ಇರುವುದಿಲ್ಲ. ದಾವಾ ಜಮಿನು ಸರ್ವೆ ನಂ. 116/5 ನೇದ್ದರಲ್ಲಿ 1, 3 ರಿಂದ 7 ನೇ ಪ್ರತಿವಾದಿಯರ ಮಧ್ಯೆ ಇದ್ದು ಅವರ ಮಧ್ಯೆ ಇನ್ನು ವಾಟ್ನಿ ಆಗಿರುವುದಿಲ್ಲ ಎಂದರೆ ಸರಿ. ನಾವು ಪ್ರತಿವಾದಿಗಳ ಅವಿಭಕ್ತ ಕುಟುಂಬದಲ್ಲಿ ಇರುವುದಿಲ್ಲ ಹೀಗಾಗಿ ದಾವಾ ಆಸ್ತಿಗಳಲ್ಲಿ ಹಕ್ಕು ಹಿತಾಸಕ್ತಿ ಇರುವುದಿಲ್ಲ

ಎಂದರೆ ಸರಿಯಲ್ಲ. ನಾವು 1 ನೇ ಪ್ರತಿವಾದಿಗೆ ಯಾವುದೇ ರೀತಿ ಸಂಬಂದ ಇಲ್ಲದೇ ಇದ್ದರು ಸಹ ದಾವಾ ಆಸ್ತಿಗಳನ್ನು ಎತ್ತಿ ಹಾಕಬೇಕೆಂಬ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈಗ ತೋರಿಸಿದ ಮದುವೆ ಕಾರ್ಡ ಮತ್ತು ವಿವಾಹ ನೊಂದಣಿ ಸರ್ಟಿಪಿಕೇಟ 1 ಮತ್ತು 11 ನೇ ಪ್ರತಿವಾದಿಯರ ಮದುವೆ ದಾಖಲಾತಿಗಳು ಇವೆ ಎಂದರೆ ಸಾಕ್ಷಿ ಅವು ಎಲ್ಲ ಸುಳ್ಳು ಇವೆ ಎಂದು ನುಡಿದಿರುತ್ತಾರೆ. ಈಗ ತೊರಿಸಿದ ಶಾಲಾ ದಾಖಲಾತಿಗಳು 1 ಮತ್ತು 11 ನೇ ಪ್ರತಿವಾದಿಗಳ ದಾಂಪತ್ಯ ಜೀವನದಿಂದ 12 ಮತ್ತು 13 ನೇ ಪ್ರತಿವಾದಿಗಳು ಜನಿಸಿದ ಬಗ್ಗೆ ಶಾಲಾ ದಾಖಲಾತಿ ಪ್ರಮಾಣ ಪತ್ರಗಳು ಇವೆ ಎಂದರೆ ಅವು ಎಲ್ಲ ಸುಳ್ಳು ಇವೆ ಎಂದು ನುಡಿದಿರುತ್ತಾರೆ. ಅದೇ ರೀತಿ ಈಗ ತೊರಿಸಿದ ದಾಖಲೆಗಳು 12 ಮತ್ತು 13 ನೇ ಪ್ರತಿವಾದಿಗಳ ಜನನ ಪ್ರಮಾಣ ಪತ್ರಗಳು, ಆಧಾರ ಕಾರ್ಡಗಳು ಇವೆ ಎಂದರೆ ಅವು ಎಲ್ಲ ಸುಳ್ಳು ಇರುತ್ತವೆ ಎಂದು ನುಡಿದಿರುತ್ತಾರೆ. ನಾವು ಮತ್ತು ನಮ್ಮ ತಾಯಿ ಸೇರಿ ದಾವಾ ಆಸ್ತಿಗಳನ್ನು ಎತ್ತಿಹಾಕಬೇಕೆಂದು ಸುಳ್ಳು ದಾವೆ ಸಲ್ಲಿಸಿ ಅದಕ್ಕೆ ಅನುಗುನವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟಿಸವಾಲುಃ 2 ನೇ ಪ್ರತಿವಾದಿ ಪರ ಐ ಎಮ್ ಎ ವಕೀಲರಿಂದಃ

ನಾನು ಪಿಯುಸಿ ದ್ವಿತಿಯವರ್ಷದವೆರೆಗ ಕಲಿತಿದ್ದೇನೆ. ವಾದ ಪತ್ರ ಬರೆಯಲು ನಾವೇ ಮಾಹಿತಿ ಕೊಟ್ಟಿರುತೇವೆ. ದಾವಾ ಆಸ್ತಿಗಳು ಎಲ್ಲ ಪಿತ್ರಾರ್ಜಿತ ಆಸ್ತಿಗಳು ಎಂದರೆ

O.S. NO. 255/2024

PW -1 .

Dated 09-06-2026.

ಸರಿ. 2 ನೇ ಪ್ರತಿವಾದಿ ಮಾತ್ರ 1 ನೇ ಪ್ರತಿವಾದಿಯ ಕಾನೂನು ಬದ್ಧ ಹೆಂಡತಿ ಎಂದರೆ ನಿಜ. 1 ನೇ ಪ್ರತಿವಾದಿಗೆ ತುಂಬಾ ದುಶ್ಚಟಗಳು ಇವೆ ಎಂದರೆ ಸರಿ. ಅವರಿಗೆ ಬೇರೆ ಹೆಣ್ಣು ಮಕ್ಕಳ ಜೊತೆ ಸಂಬಂದ ಇತ್ತು ಎಂದರೆ ಸರಿ. ಹೀಗಾಗಿ ಅವರು ನನ್ನ ತಾಯಿ 2 ನೇ ಪ್ರತಿವಾದಿಗೆ ನಿರ್ಲಕ್ಷಿಸುತ್ತಿದ್ದರು ಎಂದರೆ ಸರಿ. ಈಗ ನನ್ನ ತಾಯಿ 2 ನೇ ಪ್ರತಿವಾದಿ ಬೆನಚಿನಮರಡಿ ಗ್ರಾಮದಲ್ಲಿ ವಾಸವಿದ್ದಾರೆ ಎಂದರೆ ನಿಜ.

ಮರುವಿಚಾರಣೆ - ಇಲ್ಲ.

(ಸಾಕ್ಷಿ ವಿಚಾರಣೆಯನ್ನು ನೆರವೇರಿಸಿದ್ದು , ಸಾಕ್ಷಿ ಹೇಳಿದ ಹೇಳಿಕೆಯನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನ ನೀಡಿ , ಅದನ್ನು ಗಣಕಿಕೃತಗೊಳಿಸಿದ ಮೇರೆಗೆ ದಾಖಲಿಸಲಾಯಿತು ).

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು
ಬೈಲಹೊಂಗಲ.